O.S. 124-2020 PW-1

( ಸಾಕ್ಷಿಯನ್ನು ದಿಃ 08-11-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲು ಶ್ರೀ ಎಸ್ ಎ ಎ ವಕೀಲರಿಂದಃ

ನನ್ನ ತಾಯಿ 2 ನೇ ವಾದಿ , ಆಕೆ 1 ನೇ ವಾದಿ ಶಿವಣ್ಣನ ಜೊತೆ ವಾಸವಿದ್ದಾರೆ. ನನ್ನ ತಂದೆ ಬಸಪ್ಪ 2006 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಮರಣ ಹೊಂದಿದಾಗಿನಿಂದ ನಾವೆಲ್ಲರೂ ಪ್ರತಿವಾದಿಗಳ ಜೊತೆ ವಾಸವಿದ್ದೇವೆ. ಈ ದಾವೆ ಸಲ್ಲಿಸಿರುವ ವಿಚಾರ ನನ್ನ ತಾಯಿಗೆ ಗೊತ್ತು. ನನ್ನ ತಾಯಿಗೆ ಈ ದಾವೆಯನ್ನು ಸಲ್ಲಿಸಿರುವ ವಿಚಾರ ಗೊತ್ತಿಲ್ಲ ನಾನು ಯಾವುದೋ ದಾಖಲೆಗೆ ಸಹಿ ಬೇಕು ವಾದಪತ್ರಕ್ಕೆ ಸಹಿ ಹಾಕಿಸಿದ್ದೇನೆ ಎಂದರೆ ಸುಳ್ಳು ನಮ್ಮ ಒಟ್ಟು ಕುಟುಂಬದಲ್ಲಿ 5 ಎಕರೆ ಜಮೀನು ಇರಬಹುದು. ನನಗೆ ಸರ್ವೆ ನಂಬರ್ ಗಳ ನೆನಪಿಲ್ಲ. ನನ್ನ ಅಕ್ಕತಂಗಿಯರಿಗೆ ನನ್ನ ತಂದೆ ಬದುಕಿದ್ದಾಗಲೇ ಮದುವೆಯಾಗಿದೆ. ನನ್ನ ತಂದೆ ಬದುಕಿದ್ದಾಗಲೇ ಕುಟುಂಬದ ಆಸ್ತಿಗಳನ್ನು ಎರಡು

ಭಾಗ ಮಾಡಿ ಅದರಲ್ಲಿ ಒಂದು ಭಾಗವನ್ನು 1 ನೇ ಪ್ರತಿವಾದಿಗೆ ಕೊಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಮತ್ತೊಂದು ಭಾಗ ನಮ್ಮ ಸ್ವಾದೀನದಲ್ಲಿದೆ ಎಂದರೆ ಸುಳ್ಳು. 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಗಳನ್ನು ಅವರು ಸಾಗುವಳಿ ಮಾಡಿದ್ದಾರೆ ಎಂದರೆ ಸುಳ್ಳು. ಒಟ್ಟು ಕುಟುಂಬದಲ್ಲಿ ನಾವೆಲ್ಲರೂ ವ್ಯವಸಾಯ ಮಾಡುತ್ತಿದ್ದೇವೆ. ದಾವಾ ಐಟಂ ನಂ 1 ರಿಂದ 4 ರ ಸ್ವತ್ತುಗಳಲ್ಲಿ ಅರ್ಧ ಭಾಗ 1 ನೇ ಪ್ರತಿವಾದಿಗೆ ಹೆಸರಿಗೆ ಹೋಗಿದೆ ಎಂದರೆ ಸುಳ್ಳು. ನಾವು ಈಗ ನಮ್ಮ ಅಕ್ಕ ಭಾಗ್ಯ ಇವರ ಮನೆಯಲ್ಲಿ ವಾಸವಿದ್ದೇವೆ ಕಾರಣ ನಾವು ಭಾಗ ಕೇಳಿದಾಗ ನಮ್ಮನ್ನು ಹೊರಗೆ ಹಾಕಿರುತ್ತಾರೆ. ಈ ದಾವೆ ದಾಖಲು ಮಾಡಡುವ 6 ತಿಂಗಳು ಮೊದಲಿನಿಂದ ನಮ್ಮ ಅಕ್ಕನ ಮನೆಯಲ್ಲಿ ವಾಸವಿದ್ದೇವೆ. ನಮ್ಮ ಅಕ್ಕ ಭಾಗ್ಯ ನೀಲಗುಂದ ಗ್ರಾಮದಲ್ಲಿ ವಾಸವಿದ್ದೇವೆ. ನನ್ನ ಅಕ್ಕನ ಜೊತೆ ವಾಸವಿದ್ದೇನೆ ಎಂದು ಈ ದಾವೆ ದಾಖಲು ಮಾಡುವಾಗ ನಮ್ಮ ವಕೀಲರಿಗೆ ತಿಳಿಸಿದ್ದೇನೆ. ನನ್ನ ತಾಯಿ ಕೂಡ ನನ್ನ ಅಕ್ಕನ ಮನೆಯಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿಯ ಹೆಂಡತಿ ಗೌರಮ್ಮನಿಗೆ ಗ್ರಾಮ ಪಂಚಾಯಿತಿಯಿಂದ ಒಂದು ಮನೆ ಮಂಜೂರಾಗಿತ್ತು ಎಂದರೆ ಸುಳ್ಳು. ಸರ್ಕಾರದಿಂದ ಹಣ ಪಡೆದು 5 ನೇ ಐಟಂ ಜಾಗದಲ್ಲಿ ಒಂದು ಮನೆ ಕಟ್ಟಿದ್ದಾರೆ ಎಂದರೆ ಸುಳ್ಳು. 5 ನೇ ಐಟಂ ಆಸ್ತಿ 1 ನೇ ಪ್ರತಿವಾದಿ ಹಿಸ್ಸೆಗೆ ಬಂದಂತಹ ಆಸ್ತಿ ಎಂದರೆ ಸುಳ್ಳು. ನಾನು 5 ನೇ ಐಟಂ ಆಸ್ತಿಯಲ್ಲಿ ಅರ್ದ ಭಾಗ ಬೇಕು ಎಂದು ಇತ್ತೀಚೆಗೆ ಕೇಳಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವಂತ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತುಗಳು ವಿಭಾಗ ಆಗಿದ್ದರೂ ಸಹ ನಾನು 5 ನೇ ಐಟಂ ಆಸ್ತಿಗೋಸ್ಕರ ಸುಳ್ಳು ವ್ಯಾಜ್ಯ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಸಮಯ ಮುಂದುವರೆದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಸಿವಿಲ್ ನ್ಯಾಯಾಧೀಶರು, ಅರಕಲಗೂಡು.